# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 229/2024**

| | | | |
|---|---|---|---|
| **ಸಾಕ್ಷಿದಾರರು** | : | **ರವಿ** | **ಸಿ.ಡಬ್ಲ್ಯೂ : 6** |
| **ತಂದೆ ಹೆಸರು** | : | **ಮಹದೇವ** | **ಪಿ.ಡಬ್ಲ್ಯೂ : 5** |
| **ವಯಸ್ಸು** | : | **35 ವರ್ಷ** | |
| **ವೃತ್ತಿ** | : | **ಕೂಲಿ ಕೆಲಸ** | |
| **ವಾಸ ಸ್ಥಳ** | : | **ಅಂತನಹಳ್ಳಿ ಗ್ರಾಮ** | |

**ಸಾಕ್ಷಿಯನ್ನು ದಿಃ 20.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಈಗ ತೋರಿಸಿದ ನಿಪಿ.2 ಮತ್ತು 5 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.2 ಸಿ ಮತ್ತು ನಿಪಿ.5 ಬಿ ಎಂದು ಗುರ್ತಿಸಲಾಯಿತು. ನಿಪಿ.3 ರಲ್ಲಿ ತಾನಿರುವುದಾಗಿ ಸಾಕ್ಷಿ ಫೋಟೋ ನೋಡಿ ಗುರುತಿಸಿಕೊಂಡಿರುತ್ತಾರೆ. ದಿಃ 17.06.2024 ರಂದು ನಾವು ಕೆಲಸಕ್ಕೆ ಜಮೀನಿನ ಬಳಿ ಹೋಗಿದ್ದಾಗ ಪೊಲೀಸರು ಕರೆದು ಮಹಜರು ಮಾಡಲು ಸಹಕರಿಸಿ ಎಂದು ಕೋರಿಕೊಂಡ ಹಿನ್ನೆಲೆಯಲ್ಲಿ ನಾವು ಸ್ಥಳಕ್ಕೆ ಹೋಗಿ ಒಪ್ಪಿಕೊಂಡು ಮಹಜರು ಕಾಲದಲ್ಲಿ ಸಹಕರಿಸಿದೆವು. ಪೊಲೀಸರು ಸ್ಥಳದ ಫೋಟೋ ತೆಗೆದು ವಿವರವಾದ ಮಹಜರು ಬರೆದುಕೊಂಡರು. ಸ್ಥಳದಲ್ಲಿ ಬಿದ್ದಿದ್ದ ಒಂದು ಕುಡುಗೋಲು ಮತ್ತು ಮರದ ದೊಣ್ಣೆಯನ್ನು ಮುಂದಿನ ಕ್ರಮಕ್ಕಾಗಿ ವಶ

ಪಡಿಸಿಕೊಂಡರು. ಚಾಸಾ.1 ಮತ್ತು 5 ರವರ ನನ್ನ ಸಮಕ್ಷಮ ಇದ್ದು ನಿಪಿ.2 ಕ್ಕೆ ಸಹಿ ಮಾಡಿದರು. ಮಧ್ಯಾಹ್ನ 12.00 ರಿಂದ 12.45 ರ ತನಕ ನಿಪಿ.2 ನ್ನು ಮಾಡಿದರು. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

***<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>***

2. ನಾನು 7 ನೇ ತರಗತಿವರೆಗೆ ಓದಿದ್ದು ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಆ ದಿನ ನಾನು ಮೂಗಪ್ಪನವರ ಜಮೀನಿನಲ್ಲಿ ನಾನು ತೊಟ್ಟಿ ಕಟ್ಟುವ ಕೆಲಸಕ್ಕೆ ಹೋಗಿದೆನು. ಮೂಗಪ್ಪನವರ ಜಮೀನಿನಿಂದ ನಿಪಿ.2 ನ್ನು ಮಾಡಿದ್ದಾರೆನ್ನುವ ಸ್ಥಳ ಕೂಗಳತೆಯ ದೂರದಲ್ಲಿದೆ. ಮೂಗಪ್ಪನವರ ಜಮೀನಿಗೆ ನಾನು ಮತ್ತು ಚಾಸಾ.5 ಕೆಲಸಕ್ಕೆ ಹೋಗಿದ್ದೆವು. ಜಮೀನಿನ ಮಾಲೀಕರು ಜಮೀನಿನ ಬಳಿ ಇರಲಿಲ್ಲ. ಚಾಸಾ.1 ರವರು ಗುತ್ತಿಗೆ ಕೆಲಸ ಮಾಡಿಸುತ್ತಾರೆ ಎಂದರೆ ಸರಿ. ಚಾಸಾ.1 ರವರ ಕೈ ಕೆಳಗೆ ನೀವು ಕೆಲಸಕ್ಕೆ ಹೋಗುತ್ತೀರಾ ಎಂದರೆ ಸರಿಯಲ್ಲ. ನಿಪಿ.2 ನ್ನು ಮಾಡಿದೆ ಎನ್ನಲಾದ ಸ್ಥಳದಲ್ಲಿ ಈಗ ಮನೆ ಕಟ್ಟಿದೆ ಎಂದರೆ ಸರಿ. ಆ ಮನೆಯನ್ನು ಕಟ್ಟಿರುವಾಗ ನೀವು ಕೆಲಸಕ್ಕೆ ಹೋಗುರುತ್ತೀರಾ ಎಂದರೆ ಸರಿ. 8 ನೇ ಆರೋಪಿಯ ಜಾಗದಲ್ಲಿ ಅವರಿಗೆ ನೀವು ಮನೆ ಕಟ್ಟಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಚಾಸಾ.1 ರವರು ನಡೆಸುತ್ತಿರುವ ಗುತ್ತಿಗೆ ಕೆಲಸಗಳಲ್ಲಿ ನೀವು ನಿರಂತರವಾಗಿ ಕೆಲಸ ಮಾಡುತ್ತಿರುತ್ತೀರಾ ಎಂದರೆ ಸರಿಯಲ್ಲ. ಆ ವಿಶ್ವಾಸಕ್ಕಾಗಿ ಚಾಸಾ.1 ರವರು ನಿಮ್ಮನ್ನು ಮಹಜರಿಗೆ

ಸಾಕ್ಷೀದಾರರಾಗಲು ಕರೆಸಿದ್ದರು ಎಂದರೆ ಸರಿಯಲ್ಲ. ಚಾಸಾ.1 ರವರು ನಿಮ್ಮನ್ನು ಮಹಜರಿಗೆ ಕರೆದಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಪೊಲೀಸರು ಕರೆದಿದ್ದರು ಎಂದು ಹೇಳುತ್ತಾರೆ. ಚಾಸಾ.1 ರವರ ಬಳಿ ಕೂಲಿ ಕೆಲಸಕ್ಕೆ ಹೋಗಲು ಮುಂಗಡ ಹಣ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ರೂಢಿಗತ ಪಂಚ ಸಾಕ್ಷೀದಾರರು ಎಂದರೆ ಸರಿಯಲ್ಲ.

3. ಪೊಲೀಸರು ನೋಟೀಸನ್ನು ಜಮೀನಿನ ಬಳಿ ಕೊಟ್ಟರು. ನಿಪಿ.5 ನ್ನು ನನಗೆ ಕೊಟ್ಟಾಗ ಮಧ್ಯಾಹ್ನ 12.30 ಗಂಟೆಯಾಗಿತ್ತು. ನಿಪಿ.2 ರ ಸಂಗತಿಗಳು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆ ಮೇರೆಗೆ ನೀವು ನಿಪಿ.2 ಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸರಿ. ನಿಪಿ.2 ನ್ನು ಮಾಡುವಾಗ ಪೊಲೀಸರ ಜೊತೆ ಚಾಸಾ.1, ನಾನು ಮತ್ತು ಚಾಸಾ.5 ಇದ್ದೆವು. ನಿಪಿ.2 ನ್ನು ಮಾಡಿದ ಸ್ಥಳದ ಚಕ್ಕುಬಂದಿಯನ್ನು ಈಗ ನನಗೆ ಹೇಳಲಾಗುವುದಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿರುವುದಾಗಿ ಬರವಣಿಗೆ ಮಾಡಿಕೊಂಡು ಸಹಿ ಪಡೆದು ಫೊಟೋ ತೆಗೆಸಿದರು. ನಿಪಿ.2 ನ್ನು ಸ್ಥಳದಲ್ಲಿ ಬರೆದರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ.2 ನ್ನು ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸ್ಥಳಕ್ಕೆ ಬಂದು ಪೊಲೀಸರು ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುಮಾ.1

*ಮತ್ತು 2 ಎಲ್ಲಾ ರೈತರ ಮನೆಗಳಲ್ಲಿ ಇರುತ್ತವೆ ಎಂದರೆ ಸರಿ. ಚಾಸಾ. 1 ರವರ ಪ್ರಭಾವಕ್ಕೆ ಒಳಪಟ್ಟು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***